ತಡೆಯಲಾರದೆ ಮುನ್ನುಗ್ಗಿದರು.

ಡಿ.ಎಸ್.ಪಿ., 'ಇನ್‌ಸ್ಪೆಕ್ಟರ್, ಸ್ವಲ್ಪ ಶಾಂತರಾಗಿ, ನಿಧಾನ ನೋಡ್ಕೊಳ್ಳೋಣ' ಎಂದು ಸಮಾಧಾನಪಡಿಸುತ್ತಾ ಪವನ್ ಕಡೆ ತಿರುಗಿ, 'ನಿನಗೂ ಕೊಲೆಯಾದ ಶೀಲಾಳಿಗೂ ಅನೈತಿಕ ಸಂಬಂಧ ಇತ್ತು. ಪ್ರೊ. ಭಾಸ್ಕರ್ ಆಕೆಯನ್ನು ಮದುವೆಯಾದ ಬಳಿಕವೂ ಹಲವು ಸಲ ಅವರಿಬ್ಬರಿಗೆ ದೈಹಿಕ ತೊಂದರೆ ಕೊಡಲು ಯತ್ನಿಸಿದ್ದಿ. ಶೀಲಾಳ ಕೊಲೆಯಲ್ಲಿ ನಿನ್ನ ಕೈವಾಡ ಇದೆ ಎಂಬುದು ಕಂಪ್ಲೇಂಟುದಾರರ ಸಂದೇಹ. ಈ ಬಗ್ಗೆ ನಮ್ಮ ಪ್ರಶ್ನೆಗಳಿಗೆ ನೇರ ಉತ್ತರ ಬೇಕು' ಎಂದರು.

ಡಿ.ಎಸ್.ಪಿ.ಯವರ ಮಾತುಗಳನ್ನು ನಿರ್ಲಕ್ಷಿಸಿ, 'ಇದೇನು ಹೇಳ್ತಾ ಇದ್ದೀರಿ ಸರ್? ಶೀಲಾ ಕೊಲೆ? ಯಾರು ಮಾಡಿದ್ರು? ಯಾವಾಗ? ನನಗೊಂದೂ ಅರ್ಥವಾಗ್ತಾ ಇಲ್ಲ. ನಾನವಳನ್ನು ಮದುವೆಯಾಗ್ಬೇಕೂಂತ ಆಸೆಪಟ್ಟದ್ದು ನಿಜ. ಅದಕ್ಕೆ ನನ್ನನ್ನೇ ಮುಗಿಸಿ ಬಿಡ್ಲಿಕ್ಕೆ ಅವರು ಯತ್ನಿಸಿದ್ದರೇ ಹೊರತು ನಾನ್ಯಾರಿಗೂ ಏನೂ ಅನ್ಯಾಯ ಮಾಡಿಲ್ಲ' ಸಾಚಾ ವ್ಯಕ್ತಿಯಂತೆ ಪವನ್ ಉತ್ತರಿಸಿದ.

'ಕೊಲೆಯಾದ ರಾತ್ರಿ ನೀನು ಶೀಲಾ ಮನೆಗೆ ಹೋಗಿದ್ದೆ.'

'ಇಲ್ಲ, ಮೊನ್ನೆ ರಾತ್ರಿ ನಾನು ಮನೆಯಲ್ಲೇ ಇದ್ದೆ. ಬೇಕಿದ್ದರೆ ಸಾಕ್ಷಿ ಕೊಡಬಲ್ಲೆ.'

'ಅಂದು ನೀನು ಅವರ ಮನೆಗೆ ಹೋಗಿದ್ದೆ ಅನ್ನೋದಕ್ಕೆ ನಾವು ಸಾಕ್ಷಿ ಕೊಟ್ಟರೆ?' ನಡುವಿನಲ್ಲೆ ಛೇಡಿಸಿದರು ಇನ್‌ಸ್ಪೆಕ್ಟರ್.

'ನಿಮ್ಮಿಂದ ಆಗದ ಮಾತು ಹೇಳ್ತಾ ಇದ್ದೀರಾ ಇನ್‌ಸ್ಪೆಕ್ಟರ್. ಸುಮ್ಮನೇ ಯಾಕೆ ತಾಕೀತು ಮಾಡ್ತೀರಾ?' ಎಂದು ಪವನ್ ಗೇಲಿಯ ಧ್ವನಿಯಲ್ಲಿ ನುಡಿದದ್ದಕ್ಕೆ ಇನ್‌ಸ್ಪೆಕ್ಟರ್ ಇನ್ನಷ್ಟು ರೇಗಿದರು.

'ಪಿ.ಸಿ. ಹದಿನಾರು, ಒಳಗಿರೋರನ್ನೆಲ್ಲ ಕರ್ಕೊಂಡು ಬಾ.'

'ಸರಿ ಸರ್.'

ಕೊಡವೂರಿನ ಗೂಡಂಗಡಿಯಾತ, ಸೋಮಾರಿಕಟ್ಟೆಯ ದೀಪೂನ ನಾಲ್ಕಾರು ಗೆಳೆಯರು ಪವನ್‌ನ ಎದುರು ಬಂದು ನಿಂತರು. ಹಿಂದೊಮ್ಮೆ ಗೂಡಂಗಡಿಯ ಹತ್ತಿರ ಬೈಕ್ ನಿಲ್ಲಿಸಿ, ಸಿಗರೇಟು ಸೇದುವ ನೆಪದಲ್ಲಿ ಪ್ರೊ. ಭಾಸ್ಕರ್‌ರ ಮನೆಯ ಬಗ್ಗೆ ವಿಚಾರಿಸಿದ್ದು, ಸೋಮಾರಿಕಟ್ಟೆಯ ತರುಣರೆಲ್ಲ ತನ್ನ ಬೈಕ್‌ನ ಸುತ್ತ ನೆರೆದು ಅದೂ ಇದೂ ಪ್ರಶ್ನಿಸಿದ್ದು ಒಮ್ಮೆಲೆ ಕಣ್ಣೆದುರು ಬಂದು ಪವನ್‌ನ ಮೈಯೆಲ್ಲ ಬೆವೆತುಹೋಯಿತು.

'ಇಲ್ಲ. ಇವರು ಯಾರನ್ನೂ ನಾನು ಕಂಡಿಲ್ಲ. ಇವರ ಪರಿಚಯ ನನಗಿಲ್ಲ. ಏನು ಹೇಳ್ತೀರಿ ಸರ್? ಎಂದು ಕೇಳಲೇ?' ಎಂದು ಒಮ್ಮೆಲೆ ಯೋಚನೆಯಲ್ಲಿ ಮುಳುಗಿದ.

ತಕ್ಷಣ ಸುಧಾರಿಸಿಕೊಂಡು, 'ಯಾವತ್ತೊ ಒಮ್ಮೆ ಪ್ರೊ. ಭಾಸ್ಕರ್‌ರ ಮನೆಗೆ ಹೋಗುವ ದಾರಿ ಕೇಳಿದ್ದು ನಿಜ. ಆದರೆ ಹೋಗಿರಲಿಲ್ಲ. ಒಮ್ಮೆ ಶೀಲಾಳನ್ನು ಮಾತಾಡಿಸಿಕೊಂಡು ಬರಬೇಕೆಂದು ಆಸೆಯಾದದ್ದು ನಿಜ. ಆದ್ರೆ ಆಗಿರಲಿಲ್ಲ. ಅದಕ್ಕೂ ಕೊಲೆಯಾದ ದಿನ ಹೋದೆ ಎನ್ನೋದಕ್ಕೂ ಏನು ಸಂಬಂಧ ಸಾರ್?' ಎಂದ.

ಅವನ ಮಾತನ್ನು ಲೆಕ್ಕಿಸದೆ ಡಿ.ಎಸ್.ಪಿ., 'ನೋಡು ಪವನ್, ಇದು ಅತ್ಯಾಚಾರ, ಕೊಲೆಗೆ ಸಂಬಂಧಪಟ್ಟ ಕ್ರಿಮಿನಲ್ ಪ್ರಕರಣ. ಕೊಲೆ ನಡೆದಿದೆ, ಲಕ್ಷಗಟ್ಟಲೆ ಬೆಲೆಬಾಳುವ ಆಭರಣ ಕೂಡ ಕಳವಾಗಿದೆ. ಸುಲಭದಲ್ಲಿ ಬಿಡಲಾಗುವುದಿಲ್ಲ. ನಮ್ಮ ಅನುಮತಿ ಇಲ್ಲದೆ ನೀನು ಕೊಡವೂರು, ವೀರನಗರ ದಾಟಿ ಹೊರಗೆ ಹೋಗುವ ಹಾಗಿಲ್ಲ. ಇದಕ್ಕೆ ಸಹಿ ಹಾಕು' ಎಂದರು.

ಅವರ ಒತ್ತಾಯಕ್ಕೆ ಕಟ್ಟುಬಿದ್ದು ಪವನ್ ಸಹಿ ಹಾಕಿದ.

'ಸರಿ ನೀನು ಹೋಗಬಹುದು.'

ಪವನ್ ಸೀದಾ ಮನೆಗೆ ಬಂದ. ಬಹಳ ಆಲೋಚನೆಯಲ್ಲಿ ಬಿದ್ದ. ಚೀಲಾ ಮನೆಯ ಚಾವಡಿಯಲ್ಲೇ ಕಾಯುತ್ತಿದ್ದವ, ಪೊಲೀಸ್ ಸ್ಟೇಷನ್‌ನಲ್ಲಿ ಏನೇನು ನಡೆಯಿತು ಎಂಬುದನ್ನು ಕೇಳಿ ತಿಳಿದುಕೊಂಡ. ಸಾಧ್ಯವಾದಷ್ಟೂ ಪವನ್‌ಗೆ ಸಮಾಧಾನ ಹೇಳಿ ತನ್ನ ಮನೆಗೆ ನಡೆದ. ಅಂದಿನ ಪತ್ರಿಕೆಯಲ್ಲಿ ಬಂದಿದ್ದ ವಾರ್ತೆಯನ್ನು ಪವನ್ ಓದಿದ್ದ. ದೀಪೂ ಎಂಬಾತನ ಹೊರತಾಗಿ ಅನ್ಯರ ಹೆಸರಿಲ್ಲದ್ದಕ್ಕೆ ಸಮಾಧಾನಗೊಂಡಿದ್ದ. ಆದರೆ ಆತನಿಗಿದ್ದ ಸಮಾಧಾನ ಪೊಲೀಸ್ ಸ್ಟೇಷನ್‌ನಿಂದ ಬುಲಾವ್ ಬಂದೊಡನೆ ಹೊರಟು ಹೋಗಿತ್ತು. ಇನ್ನು ತಡಮಾಡಿದರೆ ತನಗೆ ಉಳಿಗಾಲವಿಲ್ಲವೆಂದು ಬೈಕ್‌ಏರಿ ನೇರವಾಗಿ ಗುಡ್ಡದಪ್ಪನ ದೇವಾಲಯದ ಬಳಿಗೆ ಬಂದ. ಮರದ ಪೊಟರೆಯಲ್ಲಿಟ್ಟಿದ್ದ ಕೈಚೀಲವನ್ನು ಕೆಳಗಿಳಿಸಿ ಬಾಕ್ಸಲ್ಲಿಟ್ಟು ನೇರವಾಗಿ ಮನೆಗೆ ಬಂದ. ಬಂದವನೇ ಒಡವೆಗಳನ್ನು ಒಂದು ಪ್ಲಾಸ್ಟಿಕ್ ಚೀಲಕ್ಕೆ ಸುರಿದ. ಚಿಕ್ಕದಾಗಿ ಮಡಿಕೆ ಮಾಡಿ ಬ್ರೀಫ್‌ಕೇಸಿನಲ್ಲಿ ಇರಿಸಿದ. ಒಂದೆರಡು ಜೊತೆ ಬಟ್ಟೆಯನ್ನೂ ಇರಿಸಿದ. ಕೈಚೀಲ ಹಾಗೂ ಚಿನ್ನವನ್ನು ಮುಚ್ಚಿದ್ದ ಕರ್ಚೀಫನ್ನು ಹೊರಗೊಯ್ದು ತೋಟದೊಳಗಿನ ಕಾಂಪೋಸ್ಟ್ ಗೊಬ್ಬರದ ಹೊಂಡಕ್ಕೆ ಎಸೆದ. ಹಿಂದಿರುಗಿ ಬರುತ್ತಿದ್ದಂತೆಯೇ ದೂರದಲ್ಲಿ ಜೀಪೊಂದು ಬರುವುದು ಕಾಣಿಸಿತು. ಪವನ್‌ನ ಎದೆ ನಡುಗಿತು. ತಪ್ಪಿಸಿಕೊಳ್ಳುವುದಕ್ಕೆ ಸಮಯವೂ ಸಾಕಾಗಲಿಲ್ಲ. ತಪ್ಪಿಸಿಕೊಳ್ಳುವುದಕ್ಕೆ ದಾರಿಯೂ ಇರಲಿಲ್ಲ. ಸಾವರಿಸಿಕೊಂಡು ಜೀಪಿನ ಬರುವಿಕೆಯನ್ನು ಎದಿರುಗೊಂಡ. ಹೊರಗಿಳಿದ ನಟರಾಜ್ ಆತನನ್ನು ನೋಡಿ, 'ನೀವು ಪವನ್ ಅಲ್ವೆ?'

'ಹೌದು.'

'ನಾನು ನಟರಾಜ್ ಅಂತ, ಯಾವುದೋ ಒಂದು ಕೆಲಸದ ಮೇಲೆ ಬಂದವನಿಗೆ ಇನ್ನಾವುದೋ ಕೆಲಸ ಅಂಟಿಕೊಂಡಿದೆ. ಅದರಲ್ಲಿ ನಿಮ್ಮ ಹೆಸರೂ ಸೇರಿದೆ. ಏನು ನಿಮ್ಮ ಸಮಾಚಾರ?' ಎಂದು ನಟರಾಜ್ ಪ್ರಶ್ನಿಸಿದರು.

'ನನಗೇನೂ ಗೊತ್ತಿಲ್ಲ ಸಾರ್, ಶೀಲಾಳಿಗೂ ನನಗೂ ಗೆಳೆತನ ಇತ್ತು ಅನ್ನೋ ಹಳೇ ಕತೆ ಇಟ್ಕೊಂಡು ನನ್ನ ಮೇಲೆ ಗೂಬೆ ಕೂರಿಸ್ತಿದ್ದಾರೆ. ನೀವಾದ್ರೂ ಹೇಳಿ ಸಾರ್. ಅವರಿಗೆ ನಾನೇನೂ ಮಾಡ್ಲಿಲ್ಲ, ನನಗ್ಯಾಕೆ ಹಿಂಸೆ ಕೊಡ್ತಿದ್ದಾರೆ. ನನಗೊಂದೂ ಅರ್ಥವಾಗ್ತಾ ಇಲ್ಲ ಸಾರ್.'

'ಓ.ಕೆ., ಗಾಬರಿ ಆಗ್ಬೇಡಿ. ನಿಮಗೂ ಆ ಪ್ರಕರಣಕ್ಕೂ ಸಂಬಂಧ ಇಲ್ಲ ಅಂದ್ಮೇಲೆ ನಿಮಗೇನೂ ಆಗಲ್ಲ ಬಿಡಿ' ಎಂಬುದಾಗಿ ಆತನನ್ನು ಸಮಾಧಾನಪಡಿಸಿ, ಆತನಿಗೂ ಶೀಲಾಳಿಗೂ ಯಾವ ತೆರನಾದ ಸಂಬಂಧವಿತ್ತು ಎಂಬುದನ್ನು ಕೇಳಿ ತಿಳಿದುಕೊಂಡರು. ಅವಳ ಬಗ್ಗೆ ಒಂದೊಮ್ಮೆ ಆಸಕ್ತಿ ಇದ್ದುದು ನಿಜವೆಂದೂ ಅವಳ ಮದುವೆಯಾದ ಮೇಲೆ ಒಮ್ಮೆ ಸೇಡು ತೀರಿಸಲು ಉದ್ದೇಶಿಸಿದ್ದರೂ ಬಳಿಕ ಅದನ್ನೆಲ್ಲ ಮರೆತೆನೆಂದೂ ಬಹಳ ವಿನಮ್ರವಾಗಿ ಹೇಳಿಕೊಂಡ. ಆತನ ಮಾತುಗಳನ್ನು ಎಚ್ಚರಿಕೆಯಿಂದ ಕೇಳಿಸಿಕೊಂಡು ನಟರಾಜ್ ಅಲ್ಲಿಂದ ಹೊರಟರು.

ನವದುರ್ಗಾ ಎಸ್ಟೇಟಿಗೆ ಬಂದ ನಟರಾಜರು ಚಂದ್ರಪ್ಪನವರನ್ನು ಭೇಟಿಯಾದರು. 'ಕ್ಷೇತ್ರ ಕಾರ್ಯ ಮಾಡೋದಕ್ಕೆ ಬಂದ ನನಗಿದು ಯಾಕೆ ಬೇಕು? ಹೇಗಿದ್ರೂ ಪೊಲೀಸರು ಆ ಕೆಲಸ ಮಾಡ್ತಾರಲ್ಲ. ನಾನು ನನ್ನ ಕೆಲಸ ಮಾಡ್ತೇನೆ. ನಿಮಗೆ ಹೇಳಿ ಹೋಗೋಣಾಂತ ಬಂದೆ' ಎನ್ನುತ್ತಾ ಬಂದವರೇ ಹೊರಡಲನುವಾದರು.

'ಹೇಗಿದ್ರೂ ಈ ವಿಷಯದಲ್ಲಿ ನೀವು ಒಂದಷ್ಟು ಮುಂದೆ ಹೋಗಿದ್ದೀರಿ. ಪೊಲೀಸರು ಅವರ ಕೆಲಸ ಮಾಡಲಿ. ನಾವೂ ನಮ್ಮ ಪ್ರಯತ್ನ ಮಾಡೋಣ, ಒಂದ್ನಿಮಿಷ ಕುಳಿತುಕೊಳ್ಳಿ' ಎಂದು ಒತ್ತಾಯಿಸಿದರು. ಇಬ್ಬರೂ ಅಲ್ಲಿಯವರೆಗಿನ ಬೆಳವಣಿಗೆಗಳ ಕುರಿತು ಚರ್ಚಿಸಿದರು. ನಟರಾಜ್ ಮಾತಿನ ನಡುವೆ, ಪವನ್ ಅಪರಾಧಿಯ ಯಾವ ಲಕ್ಷಣವನ್ನೂ ಬಿಟ್ಟುಕೊಡುತ್ತಿಲ್ಲವೆಂದು ತಿಳಿಸಿದರು. ಅಷ್ಟರಲ್ಲಿ ಜಾನೂ ಎಂದು ಚಂದ್ರಪ್ಪನವರು ಒಳಗಡೆ ನೋಡಿ ಕರೆದರು.

'ಇಲ್ಲ, ನನಗಷ್ಟು ಪುರುಸೊತ್ತಿಲ್ಲ, ಈಗ ಏನೂ ಬೇಕಾಗಿಲ್ಲ. ಹಿಂದಾಗಡೇಂದ ಬರ್ತೇನೆ' ಎನ್ನುತ್ತ ನಟರಾಜ್ ಎದ್ದುಬಿಟ್ಟರು. ಜಾನು ಹೊರಗೆ ಬಂದು, 'ಯಾಕೆ ಕರೆದಿರಿ?' ಎಂದು ವಿಚಾರಿಸಿದರು.

ಆಕೆಯನ್ನು ಕಂಡಾಗ ನಟರಾಜ್‌ರಿಗೆ ಪ್ರೊ. ಭಾಸ್ಕರ್ ಮನೆಯಲ್ಲಿ ಕಾಣೆಯಾದ ತರಕಾರಿ ಚೀಲದ ನೆನಪಾಯಿತು. ಜಾನು ಎಂಬ ಮನೆಕೆಲಸದಾಕೆ ಆ ಚೀಲವನ್ನು ಕೈಯಾರೆ ಹೊಲಿದು ಶೀಲಾಳಿಗೆ ಆಕೆಯ ಮದುವೆಯಂದು ತನ್ನ ನೆನಪಿಗಾಗಿ ಕೊಟ್ಟಿದ್ದು ಎಂದು ಪ್ರೊ. ಭಾಸ್ಕರ್ ನೆನಪಿಸಿಕೊಂಡಿದ್ದು ನಟರಾಜರ ಮನಸ್ಸಿನಲ್ಲಿತ್ತು.

'ನೋಡಿಮ್ಮಾ, ಶೀಲಾಗೆ ನೀವೊಂದು ಕೈಚೀಲ ಕೊಟ್ಟಿದ್ದಿರಿ ಅಲ್ವೇನು?' ನಟರಾಜ್ ಪ್ರಶ್ನಿಸಿದರು.

'ಹೌದು, ಈಗ ಅದು ಹಳತಾಗಿ ಮೂಲೆ ಸೇರಿರಬಹುದು' ಎಂದು ನೊಂದು ನುಡಿದಳು ಜಾನು.

'ಅದನ್ನು ನೀವೇ ಹೊಲಿದಿರಂತಲ್ಲ?'

'ನನಗೆಲ್ಲಿ ಹೊಲೀಲಿಕ್ಕೆ ಬರುತ್ತೆ? ಈ ಮನೆಯ ಅಮ್ಮಾವ್ರಿದ್ದಾಗ ನನಗೆ ಕೈಹೊಲಿಗೆ ಕಲಿಸಿಕೊಟ್ಟಿದ್ರು; ಕಸೂತಿ ಹಾಕೋದು. ಚೀಲ ಶೀಲಾ ತರಿಸಿ ಕೊಟ್ಟದ್ದು. ಎರಡು ನವಿಲಿನ ಚಿತ್ರ, ಮಧ್ಯದಲ್ಲಿ ಶೀಲಾಂತ ಹೆಸರು. ಅಷ್ಟೇ ನಾನು ಮಾಡಿದ್ದು' ಎನ್ನುತ್ತ ಅತ್ತುಬಿಟ್ಟಳು.